सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363
**October Vol. : 11 Issue : 5** 5126/ ಕ್ರೋಧಿ ಸಂವತ್ಸರ ಟಿತಜಬರ್ 2024 ಪುಟ 8 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24







03.10.2024 ರಂದು ಶ್ರೀರಾಮ ಪದವಿ ವಿಭಾಗದಿಂದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಕ್ರೀಡಾಸಂಘ ಆಯೋಜಿತ Beach fest ಕಾರ್ಯಕ್ರಮವು ಮಂಗಳೂರಿನ ತಣ್ಣೀರು ಬಾವಿಯಲ್ಲಿ ನಡೆಯಿತು.






**ವಿದ್ಯಾರಂಭ 3.10.2024**

ಮಾಗಣೆಯ ತಂತ್ರಿಯವರದ ಶ್ರೀ ಸುಬ್ರಮಣ್ಯ ಭಟ್ ಇವರು ಸರಸ್ವತಿ ಹೋಮದೊಂದಿಗೆ ವಿದ್ಯಾರಂಭ ಕಾರ್ಯಕ್ರಮ ನಡೆಸಿಕೊಟ್ಟರು

ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿ ಸರಸ್ವತಿ ಪೂಜೆಯೊಂದಿಗೆ ವಿದ್ಯಾರಂಭ ಕಾರ್ಯಕ್ರಮ ನಡೆಸಲಾಯಿತು.

ದಿನಾಂಕ 5.10.2024ರಂದು ಶನಿವಾರ ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ ಇಲ್ಲಿ ಸರಸ್ವತಿ ಹೋಮದೊಂದಿಗೆ ವಿದ್ಯಾರಂಭ ಕಾರ್ಯಕ್ರಮ ನಡೆಯಿತು. ಅರ್ಚಕರಾದ ಆದಿತ್ಯ ಸೂರ್ಯನಾರಾಯಣ ಭಟ್ ಕಶೆಕೋಡಿ ಇವರು ಪೂಜೆಯನ್ನು ನೆರವೇರಿಸಿ ಕಾರ್ಯಕ್ರಮದ ಮಹತ್ವವನ್ನು ತಿಳಿಸಿಕೊಟ್ಟರು.

**ಭಜನೆ–ಸಾಮೂಹಿಕ ಹುಟ್ಟಹಬ್ಬ : 1.10.2024**

ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆದ ಭಜನಾ ಕಾರ್ಯಕ್ರಮ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಆಚರಣೆಯಲ್ಲಿ ಪದವಿ ಮಹಾವಿದ್ಯಾಲಯದ ಅರ್ಥಶಾಸ್ತ್ರ ಉಪನ್ಯಾಸಕಿಯಾದ ಶ್ರೀಮತಿ ಸಂಧ್ಯಾ ಇವರು ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು. 4ನೇ ತರಗತಿಯ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನಂತರ ಹುಟ್ಟುಹಬ್ಬ ಆಚರಿಸುವ ಮಕ್ಕಳಿಗೆ ಅಧ್ಯಾಪಕ ವೃಂದದವರು ಆರತಿ, ಅಕ್ಷತೆ, ತಿಲಕಧಾರಣೆ ಮಾಡಿ, ಸಿಹಿ ನೀಡಿದರು. ವೇದಿಕೆಯಲ್ಲಿ ಶ್ರೀಮತಿ ದೇವಿಕಾ ಪಿ ಶೆಟ್ಟಿ ಉಪಸ್ಥಿತರಿದ್ದರು.

**ಎಸ್.ಜಿ.ಎಫ್.ಐ ಗೆ ಆಯ್ಕೆ: 10.10.2024**

ಮಧ್ಯಪ್ರದೇಶದಲ್ಲಿ ನಡೆದ ರಾಷ್ಟ್ರಮಟ್ಟದ ಈಜು ಸ್ಪರ್ಧೆಯಲ್ಲಿ 14ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ 6ನೇ ತರಗತಿಯ ವಿದ್ಯಾರ್ಥಿನಿ ಅನನ್ಯ ಎ ಆರ್ 200 ಮೀ. ಬಟರ್‌ಫ್ಲೈನಲ್ಲಿ ಚಿನ್ನದ ಪದಕವನ್ನು ಗಳಿಸಿ ಎಸ್.ಜಿ.ಎಫ್.ಐಗೆ ಆಯ್ಕೆ ಆಗಿದ್ದಾಳೆ.

**ಜ್ಞಾನವಿಜ್ಞಾನ ಮೇಳ : 14.10.24.**

ಜಿಲ್ಲಾ ಮಟ್ಟದ ಗಣಿತ ವಿಜ್ಞಾನ ಮೇಳ ಹಾಗೂ ಸಂಸ್ಕೃತಿ ಮಹೋತ್ಸವದಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದು, ಶಿಶುವರ್ಗ ವಿಭಾಗದಲ್ಲಿ ಭಿನ್ನರಾಶಿ ಆಧಾರಿತ ಗಣಿತ ಮಾದರಿ ಪ್ರದರ್ಶನದಲ್ಲಿ 5ನೇ ತರಗತಿಯ ಸ್ಕಂದ ತೇಜ ಪ್ರಥಮ ಸ್ಥಾನ, ಮಾಪನ ಹಾಗೂ ನಾಣ್ಯಗಳ ಆಧಾರಿತ ಪ್ರದರ್ಶನ, ಆಕೃತಿಗಳ ಗುಣಧರ್ಮಗಳ ಗಣಿತ ಮಾದರಿ ಪ್ರದರ್ಶನ 4ನೇ ತರಗತಿಯ ನಿಹಾರಿಕ ಪ್ರಥಮ ಸ್ಥಾನ, ಜಲಸಂರಕ್ಷಣೆ ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ವಿಖ್ಯಾತ್

4ನೇ ತರಗತಿ ಪ್ರಥಮ ಸ್ಥಾನ, ಸೃಜನಾತ್ಮಕ ಮಾದರಿಯಲ್ಲಿ 5ನೇ ತರಗತಿಯ ಅನ್ವೇಷ್ ಪ್ರಭು ಪ್ರಥಮ ಸ್ಥಾನ, ಸರಳ ಯಂತ್ರಗಳು ಎಂಬ ವಿಜ್ಞಾನ ಮಾದರಿಯಲ್ಲಿ 4ನೇ ತರಗತಿಯ ಬ್ರಾಹ್ಮೀ ಕೃಪಾ ಪ್ರಥಮ ಸ್ಥಾನ, ತ್ಯಾಜ್ಯ ವಸ್ತುಗಳ ನಿರ್ವಹಣೆ ಮಾದರಿ ಪ್ರದರ್ಶನದಲ್ಲಿ 4ನೇ ತರಗತಿಯ ತನ್ವಿ ಬಿ.ಕೆ ಪ್ರಥಮ ಸ್ಥಾನ, ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ವೈದೇಹಿ, ಶ್ರಾವಣಿ ದೀಪ, ಕುಶ್ಮಿತಾ ಪ್ರಥಮ ಸ್ಥಾನ ಪಡೆದುಕೊಂಡಿರುತ್ತಾರೆ.

ಕಥಾಕಥನ ಸ್ಪರ್ಧೆಯಲ್ಲಿ 5ನೇ ತರಗತಿಯ ಸನ್ನಿಧಿ ದ್ವಿತೀಯ ಸ್ಥಾನ, ಸಾರಿಗೆ ವಿಜ್ಞಾನ ಮಾದರಿಯಲ್ಲಿ 4ನೇ ತರಗತಿಯ ಚಿನ್ಮಯಿ ದ್ವಿತೀಯ ಸ್ಥಾನ, ಸೃಜನಾತ್ಮಕ ಪ್ರತಿರೂಪ ಮಾದರಿ ಪ್ರದರ್ಶನದಲ್ಲಿ 5ನೇ ತರಗತಿಯ ಸುಧನ್ವ ಕಾಮತ್ ದ್ವಿತೀಯ ಸ್ಥಾನ, ವೇದಗಣಿತ ರಸಪ್ರಶ್ನೆಯಲ್ಲಿ ತನ್ವಿ ಜೆ ಶೆಟ್ಟಿ, ಆರಾಧ್ಯ ಕೆ, ಭೂಮಿಕಾ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

**ಬಾಲವರ್ಗದಲ್ಲಿ** – 7ನೇ ತರಗತಿಯ ರಾಜೇಶ್ವರಿ ಭಟ್ ಕ್ಷೇತ್ರಫಲ ಎಂಬ ಗಣಿತ ಮಾದರಿಯಲ್ಲಿ ಪ್ರಥಮ ಸ್ಥಾನ, ಚಲನೆ ಆಧಾರಿತ ಪ್ರತಿರೂಪ ವಿಜ್ಞಾನ ಮಾದರಿಯಲ್ಲಿ 7ನೇ ತರಗತಿಯ ಭೂಮಿಕಾ ಪ್ರಥಮ ಸ್ಥಾನ, ಕೃಷಿ ಮತ್ತು ತಂತ್ರಜ್ಞಾನ ಆಧಾರಿತ ಪ್ರತಿರೂಪ 7ನೇ ತರಗತಿಯ ಸುಶ್ರುತ ಶರ್ಮ ಪ್ರಥಮ ಸ್ಥಾನ, ಆಚಾರ್ಯ ಲೇಖನ ವಾಚನದಲ್ಲಿ ಅಧ್ಯಾಪಕರಾದ ದೇವಿಕ ಪಿ ಶೆಟ್ಟಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಸೃಜನಾತ್ಮಕ ಪ್ರತಿರೂಪ ಗಣಿತ ಮಾದರಿ ಪ್ರದರ್ಶನದಲ್ಲಿ 7ನೇ ತರಗತಿಯ ವಿ.ಆರ್ ಕುಶಿ ದ್ವಿತೀಯ ಸ್ಥಾನ, ಸೆನ್ಸಾರ್ ಆಧಾರಿತ ಪ್ರತಿರೂಪದಲ್ಲಿ 7ನೇ ತರಗತಿಯ ನಿನಾದ್ ಕೈರಂಗಳ ದ್ವಿತೀಯ ಸ್ಥಾನ, ನಿಯಮಿತ ಬಹುಭುಜಾಕೃತಿ ಗಣಿತ ಮಾರಿಯಲ್ಲಿ 7ನೇ ತರಗತಿ ವೈಷ್ಣವಿ ವೈ.ಕೆ ದ್ವಿತೀಯ ಸ್ಥಾನ, ನಾರು ಮತ್ತು ನಾರಿನ ಉತ್ಪನ್ನ ಆಧಾರಿತ ಪ್ರತಿರೂಪ ವಿಜ್ಞಾನ ಮಾದರಿಯಲ್ಲಿ 7ನೇ ತರಗತಿಯ ಜಾನ್ವಿ ಎಸ್ ಪಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಗಣಿತ ಪತ್ರವಾಚನದಲ್ಲಿ 7ನೇ ತರಗತಿಯ ಚಿನ್ಮಯಿ ಎನ್ ಶೆಟ್ಟಿ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

**ಪ್ರಾಂತ ಜ್ಞಾನ ವಿಜ್ಞಾನ ಮೇಳ : 18.10.2024**

ಪ್ರಾಂತ ಮಟ್ಟದ ಗಣಿತ ವಿಜ್ಞಾನ ಮೇಳ ಹಾಗೂ ಸಂಸ್ಕೃತಿ ಮಹೋತ್ಸವದಲ್ಲಿ ಚಲನೆ ಆಧಾರಿತ ಪ್ರತಿರೂಪ ವಿಜ್ಞಾನ ಮಾದರಿಯಲ್ಲಿ 7ನೇ ತರಗತಿಯ ಭೂಮಿಕಾ ತೃತೀಯ ಸ್ಥಾನ, ಕೃಷಿ ಮತ್ತು ತಂತ್ರಜ್ಞಾನ ಆಧಾರಿತ ಪ್ರತಿರೂಪ 7ನೇ ತರಗತಿಯ ಸುಶ್ರುತ ಶರ್ಮ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಆಚಾರ್ಯ ಲೇಖನ ವಾಚನದಲ್ಲಿ ಅಧ್ಯಾಪಕರಾದ ದೇವಿಕ ಪಿ ಶೆಟ್ಟಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

**ಅಧ್ಯಾಪಕರ ಬೈಠಕ್ : 19.10.2024**

ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆದ ಅಧ್ಯಾಪಕರ ಬೈಠಕ್‌ನಲ್ಲಿ ಶಾಲಾ ಪುನರಾರಂಭ ಹಾಗೂ ಕ್ರೀಡೋತ್ಸವದ ತಯಾರಿ ಬಗ್ಗೆ ಚರ್ಚಿಸಲಾಯಿತು. ಎಲ್ಲಾ ಅಧ್ಯಾಪಕರು ಉಪಸ್ಥಿತರಿದ್ದರು.

**ಕ್ಷೇತ್ರ–ಜ್ಞಾನ ವಿಜ್ಞಾನ ಮೇಳ : 20.10.2024**

ಕ್ಷೇತ್ರ ಮಟ್ಟದ ಗಣಿತ ವಿಜ್ಞಾನ ಮೇಳ ಹಾಗೂ ಸಂಸ್ಕೃತಿ ಮಹೋತ್ಸವದಲ್ಲಿ 7ನೇ ತರಗತಿಯ ರಾಜೇಶ್ವರಿ ಭಟ್ ಕ್ಷೇತ್ರಫಲ ಎಂಬ ಗಣಿತ ಮಾದರಿಯಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

**ತಾಲೂಕು ಮಟ್ಟಕ್ಕೆ ಆಯ್ಕೆ : 23.10.2024**

ಪೆರ್ನೆಯಲ್ಲಿ ನಡೆದ ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟದಲ್ಲಿ 7ನೇ ತರಗತಿಯ ಜಾನ್ವಿ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ ಮತ್ತು 7ನೇ ತರಗತಿಯ ಅಜಯ್ 600ಮೀ ಓಟದಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆ ಆಗಿದ್ದಾನೆ. ಹಾಗೂ 400ಮೀ ಓಟದಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾನೆ.

**ಆಂಗ್ಲಮಾಧ್ಯಮ ಶಾಲೆ ಭೇಟಿ : 25.10.24**

ಪ್ರಾಥಮಿಕ ಶಾಲಾ ಅಧ್ಯಾಪಕರು ನೂತನವಾಗಿ ನಿರ್ಮಾಣವಾಗುತ್ತಿರುವ ಶ್ರೀರಾಮ ಆಂಗ್ಲಮಾಧ್ಯಮ ಶಾಲೆಗೆ ಭೇಟಿಯಿತ್ತರು. ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಮಾಹಿತಿ ನೀಡಿದರು.

**ಪ್ರತಿಭಾ ಪುರಸ್ಕಾರ: 26.10.2024**

ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಆಹ್ವಾನಿತ ಸದಸ್ಯರಾದ ಫಾರ್ಚ್ಯುನ್ ಇಂಡಸ್ಟ್ರೀಸ್‌ನ ಮಾಲಕರಾದ ಶ್ರೀ ಧೀರಜ್ ಕುಮಾರ್, ಶ್ರೀರಾಮ ವಿದ್ಯಾಕೇಂದ್ರದ NEP ವಿಭಾಗದ ಗಣಿತ ಶಿಕ್ಷಕಿಯಾದ ಕು. ಶ್ವೇತಾ, ಶಾಲಾಭಿವೃದ್ಧಿಯ ಸಮಿತಿಯ ಸದಸ್ಯರಾದ ಶ್ರೀ ಉಮೇಶ್ ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯಾದ ಮಾನಸ ಪ್ರೇರಣಾ ಗೀತೆ ಹಾಡಿದರು. ಜ್ಞಾನ–ವಿಜ್ಞಾನ ಮೇಳ, ವಲಯಮಟ್ಟದ ಪ್ರತಿಭಾ ಕಾರಂಜಿ, ಕ್ರೀಡಾಕೂಟ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಹಾಗೂ ಶಾರದಾ ವಿದ್ಯಾನಿಕೇತನ ತಲಪಾಡಿಯಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರ ಮಟ್ಟದ ಗಣಿತ ಜ್ಞಾನ ವಿಜ್ಞಾನ ಮೇಳದ ಅಚಾರ್ಯ ಲೇಖನ ವಾಚನದಲ್ಲಿ ದ್ವಿತೀಯ ಸ್ಥಾನ ಪಡೆದ ಗಣಿತ ಅಧ್ಯಾಪಕರಾದ ಶ್ರೀಮತಿ ದೇವಿಕಾ ಇವರನ್ನು ಅಭಿನಂದಿಸಿಲಾಯಿತು. ಅಧ್ಯಾಪಕರಾದ ಶ್ರೀಮತಿ ಚಂದ್ರಾವತಿ, ಶ್ರೀಮತಿ ಚೈತ್ರಶ್ರೀ ಹಾಗೂ ಕು.ದೇವಕಿ ಬಹುಮಾನ ವಾಚಿಸಿದರು.

**ಶಾಂತಿವನ ಟ್ರಸ್ಟ್ ಸ್ಪರ್ಧೆಗಳು : 26.10.2024**

ಶಾಂತಿವನ ಟ್ರಸ್ಟ್ ವತಿಯಿಂದ ಜ್ಞಾನದರ್ಶಿನಿ ಪುಸ್ತಕ ಆಧಾರಿತ ಶಾಲಾ ಮಟ್ಟದ ಪ್ರಬಂಧ ಸ್ಪರ್ಧೆ, ಚಿತ್ರಕಲೆ, ಕಂಠಪಾಠ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ವಿಜೇತರಾದ ವಿದ್ಯಾರ್ಥಿಗಳಿಗೆ ಹಾಗೂ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು, ಅಧ್ಯಾಪಕರಾದ ಶ್ರೀ ಸುಮಂತ್ ಆಳ್ವ ಎಂ. ಹಾಗೂ ದೇವಿಕಾ ಮಾತಾಜಿ ಬಹುಮಾನ ವಿತರಿಸಿದರು.

**ಒಂದನೇ ತರಗತಿ ಪ್ರವಾಸ : 26.10.2024**

1ನೇ ತರಗತಿಯ ವಿದ್ಯಾರ್ಥಿಗಳ ಹೊರಸಂಚಾರವನ್ನು ಮಾನಸ ಈಜುಕೊಳ ಮತ್ತು ಪಿಲಿಕುಳ ನಿಸರ್ಗಧಾಮಕ್ಕೆ ಆಯೋಜಿಸಲಾಗಿತ್ತು. ಒಟ್ಟು 110 ವಿದ್ಯಾರ್ಥಿಗಳು, 6 ಅಧ್ಯಾಪಕರು, 6 ಪೋಷಕರು ಹಾಗೂ ಒಬ್ಬರು ಸಹಾಯಕಿ ಈ ಪ್ರವಾಸದಲ್ಲಿ ಪಾಲ್ಗೊಂಡರು.

**ಜಿಲ್ಲಾ ಮಟ್ಟಕ್ಕೆ ಆಯ್ಕೆ : 28.10.2024**

ದ.ಕ ಜಿಲ್ಲೆ ಸಾ.ಶಿಕ್ಷಣ ಇಲಾಖೆಯಿಂದ ನಡೆದ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ 7ನೇ ತರಗತಿಯ ಜಾನ್ವಿ ಚಕ್ರ ಎಸೆತದಲ್ಲಿ ದ್ವಿತೀಯ ಸ್ಥಾನ ಮತ್ತು 7ನೇ ತರಗತಿಯ ಅಜಯ್ 600ಮೀ ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆ ಆಗಿದ್ದಾನೆ.

**ಎರಡನೇ ತರಗತಿ ಪ್ರವಾಸ : 30.10.2024**

2ನೇ ತರಗತಿಯ ವಿದ್ಯಾರ್ಥಿಗಳ ಹೊರಸಂಚಾರವನ್ನು ಮಾನಸ ಈಜುಕೊಳ ಮತ್ತು ಕದ್ರಿ ದೇವಸ್ಥಾನ ಹಾಗೂ ಪಾರ್ಕ್‌ಗೆ ಆಯೋಜಿಸಲಾಗಿತ್ತು. ಒಟ್ಟು 109 ವಿದ್ಯಾರ್ಥಿಗಳು, 8 ಅಧ್ಯಾಪಕರು, 8 ಪೋಷಕರು ಹಾಗೂ ಒಬ್ಬರು ಸಹಾಯಕಿ ಈ ಪ್ರವಾಸದಲ್ಲಿ ಪಾಲ್ಗೊಂಡರು.

**ಪ್ರೌಢಶಾಲೆ**

**ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಗಾಂಧಿ ಜಯಂತಿ 2.10.2024**

ಲಾಲ್ ಬಹುದ್ದೂರ್ ಶಾಸ್ತ್ರಿ ಮತ್ತು ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಸಂಸ್ಕೃತ ಅಧ್ಯಾಪಕರಾದ ಶ್ರೀ ಜಯರಾಮ ಲಾಲ್ ಬಹುದ್ದೂರ್ ಶಾಸ್ತ್ರಿ ಬಗ್ಗೆ ಹಾಗೂ ಕನ್ನಡ ಅಧ್ಯಾಪಕಿಯಾಗಿರುವ ದೀಪಿಕ ಮಾತಾಜಿಯವರು ಗಾಂಧೀಜಿಯವರ ಬಗ್ಗೆ ಮಾತನಾಡಿದರು.

**ಬಾಲಿಕಾ ಶಿಬಿರ ಅಕ್ಟೋಬರ್ 2, 3, 4** ಮಧುಕರ ಸಭಾಂಗಣದಲ್ಲಿ ನಡೆದ ಬಾಲಿಕಾ ಶಿಬಿರವನ್ನು ಶ್ರೀಮತಿ ಶುಭಾ ಉದ್ಘಾಟಿಸಿದರು. ವಿದ್ಯಾ–ಕೇಂದ್ರದ ಹಿರಿಯರು ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಇವರು ಶಿಬಿರದ ಮಹತ್ವದ ಬಗ್ಗೆ ಮಾತನಾಡಿದರು. ರಾಷ್ಟ್ರಸೇವಿಕ ಸಮಿತಿಯ ಕಾರ್ಯಕಾರಿಣಿ ಸದಸ್ಯೆಯಾದ ಡಾ . ಕಮಲಾ ಪ್ರಭಾಕರ್ ಭಟ್, ಸಂಚಾಲಕರು ಶ್ರೀ ವಸಂತ ಮಾಧವ ಮತ್ತು ಸಹ ಸಂಚಾಲಕರು ಶ್ರೀ ರಮೇಶ ಎನ್, ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ ಎಂ ಮತ್ತು ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ಪ್ರಾಂಶುಪಾಲರಾದ ಶ್ರೀ

ತಿರುಮಲೇಶ ಪ್ರಶಾಂತ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಪ್ರೇಕ್ಷಾ ನಿರೂಪಿಸಿ,ಅಂಕಿತ ಸ್ವಾಗತಿಸಿದರು. ಮೂರು ದಿನ ನಡೆದ ಈ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಗಣರಾಜ ಭಟ್ ಕೇದಿಲ ತಾಯಿಯ ಮಹತ್ವ ಮತ್ತು ಭಜನೆಯ ಮಹತ್ವ, ಭ. ಮೀನಾಕ್ಷಿ ಅಹಲ್ಯಾಬಾಯಿ ಹೋಳ್ಕರ್, ಬಂ. ತಾಲೂಕಿನ ಬಾಲ ಗೋಕುಲದ ಟೋಳಿ ಸದಸ್ಯ ಆಗಿರುವ ಕೀರ್ತಿ, ಅನೋಪಚಾರಿಕ ಅವಧಿಯನ್ನು ಕುಮಾರಿ ಶಿಲ್ಪಾ ಮಾತಾಜಿ, ಯೋಗಾಸನ ಯೋಗ ನಿದ್ರೆಯನ್ನು ದೇವಕಿ ಮಾತಾಜಿ, ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕಿಯಾದ ಶ್ರೀಮತಿ ನಿರೂಪಮ, ವಿಟ್ಲ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸ್ಟೇಬಲ್ ಆಗಿರುವ ಶ್ರೀಮತಿ ವಿದ್ಯಾ ಜೆ.ಕೆ ಸೈಬರ್ ಕ್ರೈಂನ ಕುರಿತಾಗಿ, ಮೈತ್ರೇಯಿ ಗುರುಕುಲದ ಮಾತಾಜಿಯರು ಹಾಗೂ ವಿದ್ಯಾರ್ಥಿನಿಯರು ರಂಗೋಲಿ ಬಿಡಿಸುವ ಕೌಶಲ್ಯ, ಕಾಲೇಜಿನ ಉಪನ್ಯಾಸಕಿ ಆದ ಶ್ರೀಮತಿ ವಿದ್ಯಾ. ಇವರು ವಿದ್ಯಾರ್ಥಿಗಳ ದಿನಚರಿ, ಸುತ್ತು ಕಥೆ ಅವಧಿಯನ್ನು ಡಾ। ಕಮಲಾ ಪ್ರಭಾಕರ್ ಭಟ್, ವರಮಹಾಲಕ್ಷ್ಮಿ, ಸುಧಾ ಎಸ್ ಭಟ್, ಶಾಂತಲಕ್ಷ್ಮಿ, ರಾಜೇಶ್ವರಿ, ಪ್ರೀತ ಹಾಗೂ ಗಾಯತ್ರಿ ಮಾತಾಜಿಯವರು ಸೋದರಿ ನಿವೇದಿತ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ನೀರಜಾ ಬಾರ್ನೆಟ್ ಬಗ್ಗೆ, ರಾಷ್ಟ್ರ ಸೇವಿಕಾ ಸಮಿತಿ ಪುತ್ತೂರು ಜಿಲ್ಲಾ ಸೇವಾ ಪ್ರಮುಖವಾಗಿರುವ ಶ್ರೀಮತಿ ಶ್ರೀದೇವಿಯವರು ರಾಷ್ಟ್ರ ಸೇವಿಕ ಸಮಿತಿಯ ಪರಿಚಯ ಮಾಡಿದರು. ಸಮಾರೋಪ ಸಮಾರಂಭದಲ್ಲಿ ಶ್ರೀ ಕೃಷ್ಣಪ್ರಸಾದ್ ಅಖಂಡ ಭಾರತ ದರ್ಶನ ಬಗ್ಗೆ ತಿಳಿಸಿದರು. ಡಾ. ಕಮಲಾ ಪ್ರಭಾಕರ್ ಭಟ್, ಶ್ರೀ ಕೃಷ್ಣಪ್ರಸಾದ್ ಶ್ರೀಮಾನ್ ಶ್ರೀ ತಿರುಮಲೇಶ್ವರ ಪ್ರಶಾಂತ ಶ್ರೀಮಾನ್ ಹಾಗೂ ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು, ಪ್ರೇರಣದಾಯಕ ವಿಡಿಯೋ ಕ್ಲಿಪ್ಪಿಂಗ್ ಹಾಕಲಾಯಿತು.

**ಈಜು ಸ್ಪರ್ಧೆಯಲ್ಲಿ ಅನರ್ಘ್ಯ ಎ ಆರ್ SGFIಗೆ ಆಯ್ಕೆ 03.10.2024**

ಮಧ್ಯಪ್ರದೇಶದಲ್ಲಿ ನಡೆದ ರಾಷ್ಟ್ರಮಟ್ಟದ ಈಜು ಸ್ಪರ್ಧೆಯಲ್ಲಿ 17ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ 9ನೇ ತರಗತಿಯ ವಿದ್ಯಾರ್ಥಿನಿ ಅನರ್ಘ್ಯ ಎ ಆರ್ ಒಂದು ಬಂಗಾರ ಪದಕ ಮತ್ತು ಒಂದು ಬೆಳ್ಳಿ ಪದಕವನ್ನು ಗಳಿಸಿ SGFIಗೆ ಆಯ್ಕೆಯಾಗಿರುತ್ತಾಳೆ.

**ಮುಕ್ತ ದಸರಾ ಕ್ರೀಡಾಕೂಟದಲ್ಲಿ ಕಬಡಿಯಲ್ಲಿ ತೃತೀಯ ಸ್ಥಾನ 06.10.2024**

ಮಂಗಳ ಕ್ರೀಡಾಂಗಣದಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಮುಕ್ತ ದಸರಾ ಕ್ರೀಡಾಕೂಟದಲ್ಲಿ ಕಬಡ್ಡಿ ಸ್ಪರ್ಧೆಯಲ್ಲಿ 17 ರ ವಯೋಮಾನದ ಬಾಲಕಿಯರ ತಂಡವು ತೃತೀಯ ಸ್ಥಾನ ಪಡೆದುಕೊಂಡಿದೆ.

**ಜಿಲ್ಲಾ – ಗಣಿತ ವಿಜ್ಞಾನ ಮೇಳ 14.10.24**

ಜಿಲ್ಲಾ ಮಟ್ಟದ ಗಣಿತ ವಿಜ್ಞಾನ ಮೇಳದಲ್ಲಿ ವಿಜೇತರಾದ ವಿದ್ಯಾರ್ಥಿಗಳು.

ಬಾಲವರ್ಗದಲ್ಲಿ ಸಾನ್ವಿಕಾಮತ್ ಶಿವಾನಿ , ಪ್ರಜ್ಞಾ –8 ನೇ ತರಗತಿ – ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ಪ್ರಥಮ ಸ್ಥಾನ, ಭುವಿ 8ನೇ – ವಿಜ್ಞಾನ ಪತ್ರ ವಾಚನ ತೃತೀಯ ಸ್ಥಾನ*, ಜಗನ್ 8ನೇ ತರಗತಿ – ವಿಜ್ಞಾನ ಮಾದರಿ ಪ್ರಥಮ ಸ್ಥಾನ :2 ತೃತೀಯ ಸ್ಥಾನ : 1

*ಕಿಶೋರ ವರ್ಗ* ಪ್ರಥಮ ಸ್ಥಾನ :ಸುಕೇಶ್ 9 ನೇ ತರಗತಿ –ಗಣಿತ ಪತ್ರ ವಾಚನ,. ಅನುಶ್ರೀ , ತರುಣ್, ಈಶಾನ್– 9 , 10 ನೇ –ವೇದ ಗಣಿತ ರಸ ಪ್ರಶ್ನೆ , ಪ್ರೇಕ್ಷ –9 ನೇ ತರಗತಿ– ವಿಜ್ಞಾನ ಮಾದರಿ ತೃತೀಯ ಸ್ಥಾನ*, ಪ್ರೀತೇಶ್ ,ವಿಖ್ಯಾತ್, ಆರುಷ್–10 ನೇ–ಸಂಸ್ಕೃತಿ ಜ್ಞಾನ ರಸ ಪ್ರಶ್ನೆ ಪ್ರಥಮ ಸ್ಥಾನ :3 ತೃತೀಯ ಸ್ಥಾನ : 1 ಒಟ್ಟು =7 ಸ್ಪರ್ಧೆಗಳಲ್ಲಿ ಬಹುಮಾನವನ್ನು ಪಡೆದು–ಕೊಂಡಿದ್ದಾರೆ.

**ಬಾಲಕರ ಶಿಬಿರ ಅಕ್ಟೋಬರ್ 17–20**

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾರಂಭಿಕ ಶಿಕ್ಷಾವರ್ಗದ ಶಿಬಿರಕ್ಕೆ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಿದರು.

**ರಾಷ್ಟ್ರಮಟ್ಟಕ್ಕೆ ಆಯ್ಕೆ 19.10.2024**

ಶಾರದಾ ವಿದ್ಯಾನಿಕೇತನ ತಲಪಾಡಿಯಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರಮಟ್ಟದ ಗಣಿತ ವಿಜ್ಞಾನ ಮೇಳದಲ್ಲಿ ವಿಜೇತರಾದ ವಿದ್ಯಾರ್ಥಿ ಬಾಲ ವರ್ಗದ ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ 8ನೇ ತರಗತಿಯ ಸಾನ್ವಿ ಕಾಮತ್ ,ಶಿವಾನಿ ಮತ್ತು ಪ್ರಜ್ಞಾ ಪ್ರಥಮ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕರ ತಂಡವು ಪ್ರಥಮ ತಂಡ ಪ್ರಶಸ್ತಿ 24.10.2024 ಶ್ರೀ ರಾಮ ಚಂದ್ರ ಪ್ರೌಢ ಶಾಲೆ ಪೆರ್ನೆಯಲ್ಲಿ ನಡೆದ ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಕಲ್ಲಡ್ಕ ಶ್ರೀರಾಮ ಪ್ರೌಢ ಶಾಲೆಯ 8ನೇ ತರಗತಿಯ ಬಾಲಕರ ತಂಡವು ಪ್ರಥಮ ತಂಡ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ.

**ಚಾಂಪಿಯನ್ ಶಿಪ್ ಪಡೆದ ಶ್ರೇಯಾಂಕ್ 24.10.24**

ಶ್ರೀ ರಾಮಚಂದ್ರ ಪ್ರೌಢಶಾಲೆ ಪೆರ್ನೆಯಲ್ಲಿ ನಡೆದ ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟದಲ್ಲಿ 8ನೇ ತರಗತಿಯ ಶ್ರೇಯಾಂಕ್ 200ಮೀ., 100 ಮೀಟರ್ ಮತ್ತು ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಹಾಗೂ 4x100 ರಿಲೇ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೆಯೇ ವೈಯಕ್ತಿಕ ಚಾಂಪಿಯನ್ ಶಿಪ್ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ತಾಲೂಕು ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು – ದಿಶಾಲಿ 9ನೇ, 110 ಮೀ. ಹರ್ಡಲ್ಸ್ ಪ್ರಥಮ ಸ್ಥಾನ, 1500 ಮೀ.ಓಟ ದ್ವಿತೀಯ ಸ್ಥಾನ100 ಮೀ.ಓಟ ದ್ವಿತೀಯ ಸ್ಥಾನ 4ಥ100 ರಿಲೇ ದ್ವಿತೀಯ ಸ್ಥಾನ, 4ಥ400 ರಿಲೇ ದ್ವಿತೀಯ ಸ್ಥಾನ. ಸಾನ್ವಿ 8 ನೇ,3000 ಮೀ.ಓಟ ಪ್ರಥಮ ಸ್ಥಾನ,ತ್ರಿವಿಧ ಜಿಗಿತ ಪ್ರಥಮ ಸ್ಥಾನ, 4ಥ400 ರಿಲೇ ದ್ವಿತೀಯ ಸ್ಥಾನ , ಪ್ರೇಕ್ಷಾ 9ನೇ 400 ಮೀ.ಹರ್ಡಲ್ಸ್ ತೃತೀಯ ಸ್ಥಾನ, 4ಥ100 ರಿಲೇ ದ್ವಿತೀಯ ಸ್ಥಾನ, ತನ್ವಿ 9 ನೇ ಜಾವಲಿನ್ ಎಸೆತ ದ್ವಿತೀಯ ಸ್ಥಾನ, 4x400 ರಿಲೇ ದ್ವಿತೀಯ ಸ್ಥಾನ , ಪಲ್ಲವಿ 10 ನೇ ಹ್ಯಾಮರ್ ಎಸೆತ ಪ್ರಥಮ ಸ್ಥಾನ, ಸಾನ್ವಿಯಾ 10ನೇ 3000 ಮೀ. ಓಟ ದ್ವಿತೀಯ ಸ್ಥಾನ, ಮೇಘಶ್ರೀ 10ನೇ 4x100 ರಿಲೇ ದ್ವಿತೀಯ ಸ್ಥಾನ, 4x400 ರಿಲೇ ದ್ವಿತೀಯ ಸ್ಥಾನ, 8. ಹರ್ಷಿತಾ 10ನೇ, 4ಥ100 ರಿಲೇ ದ್ವಿತೀಯ ಸ್ಥಾನ, ಶ್ರೇಯಾಂಕ್ 8 ನೇ 100 ಮೀ.ಓಟ ಪ್ರಥಮ ಸ್ಥಾನ, 200 ಮೀ ಓಟ ಪ್ರಥಮ ಸ್ಥಾನ, ಉದ್ದ ಜಿಗಿತ ಪ್ರಥಮ ಸ್ಥಾನ, 4ಥ100 ರಿಲೇ ಪ್ರಥಮ ಸ್ಥಾನ, ಸಂಕೀರ್ತ್ ಶೆಟ್ಟಿ 8 ನೇ ಚಕ್ರ ಎಸೆತ ಪ್ರಥಮ ಸ್ಥಾನ, ಗುಂಡು ಎಸೆತ ಪ್ರಥಮ ಸ್ಥಾನ, 4ಥ100 ರಿಲೇ ದ್ವಿತೀಯ ಸ್ಥಾನ, ಗುರುನಂದನ್ 8 ನೇ 600ಮೀ. ಓಟ ಪ್ರಥಮ ಸ್ಥಾನ,80 ಮೀ. ಹರ್ಡಲ್ಸ್ ತೃತೀಯ ಸ್ಥಾನ, 4ಥ100 ರಿಲೇ ದ್ವಿತೀಯ ಸ್ಥಾನ, ಭವಿಷ್ ಅರಸ 8 ನೇಚಕ್ರ ಎಸೆತ ತೃತೀಯ ಸ್ಥಾನ, ಮುರಳೀಧರ 8 ನೇ 4ಥ100 ರಿಲೇ ದ್ವಿತೀಯ ಸ್ಥಾನ, ಆಶ್ಲೇಷ್ 10ನೇ 1500 ಮೀ.ಓಟ ಪ್ರಥಮ ಸ್ಥಾನ, 400ಮೀ. ಹರ್ಡಲ್ಸ್ ಪ್ರಥಮ ಸ್ಥಾನ, ತ್ರಿವಿಧ ಜಿಗಿತ ತೃತೀಯ ಸ್ಥಾನ, 4ಥ400 ರಿಲೇ ತೃತೀಯ ಸ್ಥಾನ ಕಾರ್ತಿಕ್ 10ನೇ ಎತ್ತರ ಜಿಗಿತ ದ್ವಿತೀಯ ಸ್ಥಾನ, ಅವಿನಾಶ್ 10ನೇ 4ಥ400 ರಿಲೇ ತೃತೀಯ ಸ್ಥಾನ .ಸಂಕೇತ್ 10ನೇ 4ಥ400 ರಿಲೇ ತೃತೀಯ ಸ್ಥಾನ. ಶ್ರೇಯಸ್ 9ನೇ 4ಥ400 ರಿಲೇ ತೃತೀಯ ಸ್ಥಾನ 8 ನೇ ತರಗತಿಯ ಬಾಲಕರ ತಂಡವು ಪ್ರಥಮ ತಂಡ ಪ್ರಶಸ್ತಿಯನ್ನು ಪಡೆದು–ಕೊಂಡಿರುತ್ತಾರೆ.

**ಜಿಲ್ಲಾ ಮಟ್ಟಕ್ಕೆ ಆಯ್ಕೆ**

28.10.2024. ಮತ್ತು 29.10.2024 ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆ ವಿದ್ಯಾನಗರ ಪೆರಾಜೆ ಮಾಣಿ . ಇಲ್ಲಿ ನಡೆದ ಬಂ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ 8ನೇ ತರಗತಿಯ ಸಂಕೀರ್ತ್ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ, 8ನೇ ತರಗತಿಯ ಶ್ರೇಯಾಂಕ್ 100 ಮೀಟರ್ ಓಟದಲ್ಲಿ ತೃತೀಯ, 200 ಮೀ. ಮತ್ತು ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ, 9ನೇ ತರಗತಿಯ ತನ್ವಿ ಈಟಿ ಎಸೆತದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.

**ಅತಿಥಿಗಳ ಭೇಟಿ 28.10.2024**

ಮಧುಕರ ಸಭಾಂಗಣದಲ್ಲಿ ನಡೆದ ಸರಸ್ವತಿ ವಂದನೆಯಲ್ಲಿ ಶ್ರೀ ಕಡಮಜಲು ಸುಭಾಶ್ ರೈ. (ಖ್ಯಾತ ಕೃಷಿಕರು ತಳಿಗಳ ಬಗ್ಗೆ ಮಾಹಿತಿ ಹೊಂದಿದವರು. ಹಾಗೂ ರಾಷ್ಟ್ರ

ಮತ್ತು ರಾಜ್ಯ ಪ್ರಶಸ್ತಿಗಳು ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ), ಶ್ರೀ ವಿಪುಲ ಎಸ್. ರೈ ಇವರು ಅಮೇರಿಕಾದ ಕ್ಯಾಲಿಫೋರ್ನಿಯಾ ಲಾಸ್ ಏಂಜಲೀಸ್‌ನಲ್ಲಿ ನೆಲೆಸಿರುವ, ಪ್ರಸ್ತುತ ಬೋಯಿಂಗ್ ವಿಮಾನ ಕಂಪನಿಯಲ್ಲಿ Airo space system engineer ಇವರು ಉಪಸ್ಥಿತರಿದ್ದರು.

ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳು.

ದಿನಾಂಕ : 28.10.24 ಮತ್ತು 29.10.2024 ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆ ವಿದ್ಯಾನಗರ ಪೆರಾಜೆ ಮಾಣಿ. ಇಲ್ಲಿ ನಡೆದ ಬಂಟ್ವಾಳ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಶ್ರೀ ರಾಮ ಪ್ರೌಢಶಾಲೆಯ 10ನೇ ತರಗತಿಯ ಪಲ್ಲವಿ ಹ್ಯಾಮರ್ ಎಸೆತದಲ್ಲಿ ತೃತೀಯ ಸ್ಥಾನ, 10ನೇ ತರಗತಿಯ ಆಶ್ಲೇಷ್ 1500 ಮೀಟರ್ ಓಟದಲ್ಲಿ ತೃತೀಯ, 400 ಮೀ. ಹರ್ಡಲ್ಸ್ ನಲ್ಲಿ ತೃತೀಯ ಸ್ಥಾನ, 8ನೇ ತರಗತಿಯ ಬಾಲಕರ ತಂಡವು ಪ್ರಥಮ ತಂಡ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ.

**ಸೆಕೆಂಡರಿ ಸ್ಕೂಲ್**

**ಜಿಲ್ಲಾ ಜ್ಞಾನ ವಿಜ್ಞಾನ ಮೇಳ 14.10.2024**

ಜಿಲ್ಲಾಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ 10ನೇ ತರಗತಿಯ ವಿದ್ಯಾರ್ಥಿನಿ ಮನಾಲಿ ದೇವಸ್ಯ ಗಣಿತ ಮಾದರಿ ತಯಾರಿಕೆಯಲ್ಲಿ ದ್ವಿತೀಯ ಸ್ಥಾನ, 9ನೇ ತರಗತಿಯ ವಿದ್ಯಾರ್ಥಿನಿ ಮೋನಿಷಾ ಕೆ.ಎಂ ವಿಜ್ಞಾನ ಮಾದರಿ ತಯಾರಿಕೆಯಲ್ಲಿ ದ್ವಿತೀಯ ಸ್ಥಾನ ಹಾಗೂ ಹತ್ತನೇ ತರಗತಿಯ ವಿದ್ಯಾರ್ಥಿ ವರುಣ್ ಸಂವೇದಕ ಆಧಾರಿತ ವಿಜ್ಞಾನ ಮಾದರಿ ತಯಾರಿಕೆಯಲ್ಲಿ ತೃತೀಯ ಸ್ಥಾನವನ್ನು ಗಳಿಸಿರುತ್ತಾರೆ.

**ಬಾಲಕರ ಶಿಬಿರದಲ್ಲಿ ಭಾಗಿ: 17.10.2024**

ದಿನಾಂಕ 17–10–2024 ರಿಂದ 19–10–2024ರ ವರೆಗೆ ವಿದ್ಯಾಕೇಂದ್ರದಲ್ಲಿ ನಡೆದ ಬಾಲಕರ ಶಿಬಿರದಲ್ಲಿ ಶ್ರೀರಾಮ ಸೆಕೆಂಡರಿ ಸ್ಕೂಲ್‌ನ 9ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಾಷ್ಟ್ರ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ದ್ವಿತೀಯ

ಅ 14ರಿಂದ 17ರ ವರೆಗೆ ಮಧ್ಯಪ್ರದೇಶದ ದೇವಾಸ್‌ನಲ್ಲಿ ನಡೆದ ರಾಷ್ಟ್ರ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ 10ನೇ ತರಗತಿಯ ವಿಖ್ಯಾತ್ ಆರ್ ಶೆಟ್ಟಿ ದ್ವಿತೀಯ ಸ್ಥಾನ ಪಡೆದಿರುತ್ತಾನೆ.

**ವಲಯ ಕ್ರೀಡಾಕೂಟದಲ್ಲಿ ಭಾಗಿ 23.10.24**

ಶ್ರೀರಾಮಚಂದ್ರ ಪ್ರೌಢ ಶಾಲೆ ಪೆರ್ನೆ ಇಲ್ಲಿ ನಡೆದ ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಶ್ರೀ ರಾಮ ಸೆಕೆಂಡರಿ ಸ್ಕೂಲ್ ನ ವಿದ್ಯಾರ್ಥಿಗಳು ಭಾಗವಹಿಸಿದ್ದು, ಗುಂಡು ಎಸೆತ ಸ್ಪರ್ಧೆಯಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳಾದ ಅರ್ಜುನ್ ದ್ವಿತೀಯ ಸ್ಥಾನ ಮತ್ತು ಜೇಂಕಾರ್ ಗುಂಡು ಎಸೆತದಲ್ಲಿ ದ್ವಿತೀಯ ಸ್ಥಾನ ಪಡೆದು ಮತ್ತು 9ನೇ ತರಗತಿ ಯ ವಿದ್ಯಾರ್ಥಿನಿ ಜಾನ್ವಿ ಪಿ ಎಸ್ 200 ಮೀ ಓಟದಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ.

**ಭಜನೆ–ಸಾಮೂಹಿಕ ಹುಟ್ಟುಹಬ್ಬ 30.10.24**

ಕಾರ್ಯಕ್ರಮದಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನಡೆಯಿತು.

**ಗೂಡು ದೀಪ ತಯಾರಿ ಸ್ಪರ್ಧೆ30.10.2024**

ದೀಪಾವಳಿ ಹಬ್ಬದ ಪ್ರಯುಕ್ತ ಶ್ರೀರಾಮ ಸೆಕೆಂಡರಿ ಸ್ಕೂಲ್ ನಲ್ಲಿ ಗೂಡುದೀಪ ತಯಾರಿ ಸ್ಪರ್ಧೆಯನ್ನು ಆಯೋಜಿಸಲಾಯಿತು. ಎಲ್ಲಾ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ತೀರ್ಪುಗಾರರಾಗಿ ಶ್ರೀರಾಮ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ಉಪನ್ಯಾಸಕಿಯಾಗಿರುವ ಶ್ರೀಮತಿ ಶೈಲಿನಿ ಮಾತಾಜಿ ಹಾಗೂ ಹಾಸ್ಟೆಲ್ ವಾರ್ಡನ್ ಉದಯ ಶ್ರೀಮಾನ್ ಆಗಮಿಸಿದ್ದರು.

1. 'ಉತ್ಥಾನ' ಬಾಲಿಕಾ ಶಿಬಿರ – 2024

ಶ್ರೀರಾಮ ವಿದ್ಯಾಕೇಂದ್ರದ ವತಿಯಿಂದ ಪದವಿ ಪೂರ್ವ ವಿದ್ಯಾರ್ಥಿನಿಯರಿಗಾಗಿ ಆಯೋಜಿಸಿದ ರಾಷ್ಟ್ರೀಯ ಸಂಸ್ಕಾರ ಶಿಬಿರ 'ಉತ್ಥಾನ'ದ ಉದ್ಘಾಟನಾ ಸಮಾರಂಭವು ದಿನಾಂಕ 06 ಅಕ್ಟೋಬರ್ 2024ನೇ ಭಾನುವಾರ ಬೆಳಗ್ಗೆ 10:00 ಗಂಟೆಗೆ 'ಅಜಿತ ಕುಮಾರ ಸಭಾಭವನ'ದಲ್ಲಿ ನೆರವೇರಿತು.

ಡಾ। ವಿಜಯ ಸರಸ್ವತಿ ವಿವೇಕಾನಂದ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು ಶಿಬಿರವನ್ನು ಉದ್ಘಾಟಿಸಿ ಈ ಶಿಬಿರದ ಮುಖ್ಯ ಉದ್ದೇಶವು ರಾಷ್ಟ್ರದ ಚಿಂತನೆಯಾಗಿದ್ದು, ವಿದ್ಯಾರ್ಥಿಗಳಾದ ನೀವು ರಾಷ್ಟ್ರದ ಚಿಂತನೆಯ ರಾಯಭಾರಿಗಳಾಗಬೇಕೆಂದು ತಿಳಿಸಿದರು. ಮುಂದೆ ಬರುವ ಸವಾಲುಗಳನ್ನು ಎದುರಿಸಲು ಇಂದಿನಿಂದಲೇ ನೀವು ಸಮರ್ಥರಾಗಬೇಕು ಹಾಗೂ ನಮ್ಮೆಲ್ಲರ ಆಂತರಿಕ ಬೆಳವಣಿಗೆಯು ಆಗಬೇಕಾದರೆ ಇಂತಹ ಶಿಬಿರಗಳಿಂದ ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ, ಪದವಿ ಪೂರ್ವ ಪ್ರಾಚಾರ್ಯರಾದ ವಸಂತ ಬಲ್ಲಾಳ್, ಪದವಿ ಕಾಲೇಜಿನ ಪ್ರಾಚಾರ್ಯರಾದ ಕೃಷ್ಣಪ್ರಸಾದ್, ಶಿಬಿರ ಕಾರ್ಯವಾಹಿಕೆ ಶ್ರೀಮತಿ ಶೋಭಾ ವಿ ಶೆಟ್ಟಿ ಉಪಸ್ಥಿತರಿದ್ದು, ಶ್ರೀಮತಿ ಶುಭಾಶಿಣಿ ಸ್ವಾಗತಿಸಿ, ಕು. ಅಕ್ಷಿತಾ ಧನ್ಯವಾದಗಳನ್ನು ಸಮರ್ಪಿಸಿದರು. ಕುಮಾರಿ ನಯನಾ ಕಾರ್ಯಕ್ರಮ ನಿರೂಪಿಸಿದರು.

**'ಉತ್ಥಾನ' ಶಿಬಿರದ ಸಮಾರೋಪ**

ರಾಷ್ಟ್ರೀಯ ಸಂಸ್ಕಾರ ಬಾಲಿಕಾ ಶಿಬಿರ ಉತ್ಥಾನ ಇದರ ಸಮಾರೋಪ ಸಮಾರಂಭವು ಶ್ರೀಯುತ ವಸಂತ ಮಾಧವ ಸಂಚಾಲಕರು, ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ದೇಶಿಯ ಉತ್ಪನ್ನಗಳು, ಹಾಗೂ ಸ್ವದೇಶಿ ಸಂಸ್ಕೃತಿಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಈ ಶಿಬಿರದ ಮೂಲಕ ನೀವು ಹಲವಾರು ವಿಷಯಗಳನ್ನು ತಿಳಿದುಕೊಂಡಿರಬಹುದು. ಅದೆಲ್ಲವೂ ನಿಮ್ಮ ಜೀವನದ ಅಡಿಪಾಯವಾಗಲಿ ಎಂದರು. ಇದೇ ಸಂದರ್ಭದಲ್ಲಿ ವೇದಿಕೆಯಲ್ಲಿ ಡಾ।ಕಮಲ ಪ್ರಭಾಕರ್ ಭಟ್, ಶ್ರೀವಸಂತ್‌ಬಲ್ಲಾಳ್,ಶ್ರೀಮತಿ ಶೋಭ ವಿ ಶೆಟ್ಟಿ ಉಪಸ್ಥಿತರಿದ್ದರು. ಕುಮಾರಿ ಶ್ವೇತಾ ಸ್ವಾಗತಿಸಿ, ಶ್ರೀಮತಿ ಶೋಭಾ ವಿ ಶೆಟ್ಟಿ ವಂದಿಸಿ, ಶ್ರೀಮತಿ ದೀಪಿಕಾ ಇವರು ಕಾರ್ಯಕ್ರಮವನ್ನು ನಿರೂಪಿಸಿದರು.

**ತಾಲೂಕು ಮಟ್ಟದ ಕೀಡಾಕೂಟ 7.10.2024**

ಪದವಿಪೂರ್ವ ಶಿಕ್ಷಣ ಇಲಾಖೆ ಮಂಗಳೂರು ಹಾಗೂ ಸರಕಾರಿ ಪದವಿ ಪೂರ್ವ ಕಾಲೇಜು ನಾರ್ಶ ಮೈದಾನ ಇದರ ಜಂಟಿ ಆಶ್ರಯದಲ್ಲಿ ಮಂಗಳ ಕ್ರೀಡಾಂಗಣದಲ್ಲಿ ನಡೆದ ಬಂಟ್ವಾಳ ತಾಲೂಕು ಮಟ್ಟದ ಕೀಡಾಕೂಟ ಸ್ಪರ್ಧೆಯಲ್ಲಿ ಪ.ಪೂ. ಕಾಲೇಜಿನ ಬಾಲಕರ ಹಾಗೂ ಬಾಲಕಿಯರ ತಂಡವು ಸಮಗ್ರ ಪ್ರಶಸ್ತಿ ಪಡೆದಿರುತ್ತದೆ.

**ರಾಷ್ಟ್ರ ಮಟ್ಟದ ಕಬ್ಬಡ್ಡಿ ಪಂದ್ಯಾಟ**

ಮಧ್ಯಪ್ರದೇಶದ ಹರ್ದಾದಲ್ಲಿ ನಡೆದ ವಿದ್ಯಾಭಾರತಿ ರಾಷ್ಟ್ರೀಯ ಕಬ್ಬಡ್ಡಿ ಪಂದ್ಯಾಟದಲ್ಲಿ 19ರ ವಯೋಮಾನದ ಬಾಲಕರ ವಿಭಾಗದಲ್ಲಿ ಕಲ್ಲಡ್ಕ ಶ್ರೀರಾಮ ಪದವಿಪೂರ್ವ ಕಾಲೇಜಿನ ತಂಡ ದ್ವಿತೀಯ ಸ್ಥಾನ ಪಡೆದಿದೆ. ಲಕ್ಷೀಶ, ನಿಶಾಂತ್ ಡಿ, ಶೋಬಿತ್,ವಿಂತೇಶ್, ,ದೀವಿತ್,ಚರಣ್ ಮತ್ತು ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಪ್ರಶಾಂತ್ ಭಾಗವಹಿಸಿರುತ್ತಾರೆ.

**ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಗಣಿತ ಮೇಳ 14.10.2024**

ಸಾಂದಿಪಿನಿ ವಿದ್ಯಾಸಂಸ್ಥೆ ನರಿಮೊಗರು ಇಲ್ಲಿ ನಡೆದ ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಗಣಿತ ಮೇಳದಲ್ಲಿ ವೇದಿಕ ಗಣಿತ ಸ್ಪರ್ಧೆಯಲ್ಲಿ ಚಿನ್ಮಯಿ,ಆಶಿಕಾ,ಚೈತ್ರ, ಪ್ರಥಮ ಸ್ಥಾನ , ವಿಜ್ಞಾನ ಪತ್ರ ಲೇಖನದಲ್ಲಿ ಅಂಕಿತ್ ಗುಪ್ತ ಪ್ರಥಮ ಸ್ಥಾನ ,ಆಶು ಭಾಷಣ ಸ್ಪರ್ಧೆಯಲ್ಲಿ ಯಶಸ್ ಪ್ರಥಮ ಸ್ಥಾನ, ಸಂಸ್ಕೃತಿ ಜ್ಞಾನ ರಶಪ್ರಶ್ನೆಯಲ್ಲಿ ಶ್ರೀನಿವಾಸ್ , ತುಷಾರ್,ಗಗನ್ ಪ್ರಥಮ ಸ್ಥಾನ, ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ತಿಲಕ್ ಪ್ರಥಮ ಸ್ಥಾನ,ಗಣಿತ ಪತ್ರ ಲೇಖನದಲ್ಲಿ ಶ್ರಮಿಕಾ ದ್ವಿತೀಯ ಸ್ಥಾನ, ಗಣಿತ ಮಾದರಿ ಪ್ರದರ್ಶನದಲ್ಲಿ ಕೃತಿ ದ್ವಿತೀಯ ಸ್ಥಾನ, ಗಣಿತ ಮಾದರಿ ಪ್ರದರ್ಶನದಲ್ಲಿ ಆಲಕ ದ್ವಿತೀಯ ಸ್ಥಾನ, ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ಆದಿತ್ಯ ದ್ವಿತೀಯ ಸ್ಥಾನ, ಗಣಿತ ಪ್ರಯೋಗದಲ್ಲಿ ಸುಷ್ಮಾ ತ್ರತೀಯ ಸ್ಥಾನ , ವಿಜ್ಞಾನ ಪ್ರಯೋಗದಲ್ಲಿ ಶ್ರೀ ಗೌರಿ,ಯುಕ್ತಿ,ಪ್ರೀತಿ ತ್ರತೀಯ ಸ್ಥಾನ ಪಡೆದಿರುತ್ತಾರೆ.

**ವಿದ್ಯಾಭಾರತಿ ಪ್ರಾಂತ, ಕ್ಷೇತ್ರಿಯ ಮಟ್ಟದ ಜ್ಞಾನ ವಿಜ್ಞಾನ ಗಣಿತ ಮೇಳ 16.10.24**

ಶಾರದಾ ವಿದ್ಯಾನಿಕೇತನ ತಲಪಾಡಿಯಲ್ಲಿ ನಡೆದ ವಿದ್ಯಾಭಾರತಿ ಪ್ರಾಂತ ಮಟ್ಟದ ಗಣಿತ ವಿಜ್ಞಾನ ಮೇಳದಲ್ಲಿ ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ಶ್ರೀನಿವಾಸ, ತುಷಾರ್, ಗಗನ್ – ಪ್ರಥಮ ಸ್ಥಾನ, ವೇದ ಗಣಿತ ರಸಪ್ರಶ್ನೆಯಲ್ಲಿ ಚಿನ್ಮಯಿ, ಆಶಿಕಾ, ಚೈತ್ರ –ಪ್ರಥಮ ಸ್ಥಾನ , ವಿಜ್ಞಾನ ಪತ್ರ ಲೇಖನದಲ್ಲಿ ಅಂಕಿತ್ ಗುಪ್ತ – ಪ್ರಥಮ ಸ್ಥಾನ, ಆಶು ಭಾಷಣದಲ್ಲಿ ಯಶಸ್ ಪ್ರಥಮ ಸ್ಥಾನ ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ತಿಲಕ್ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

**ಪ್ರೇರಣಾ ಶಿಬಿರ 17.10.2024**

ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ವತಿಯಿಂದ ಬೋದಕೇತರ ಸಿಬ್ಬಂದಿಗಳಿಗೆ ನಡೆದ ಕಾರ್ಯಾಗಾರದಲ್ಲಿ ಶ್ರೀಮತಿ ಅರುಣಾ ಭಟ್, ಶ್ರೀಮತಿ ನಿಶಾ, ಶ್ರೀಮತಿ ಸವಿತಾ, ಶ್ರೀಮತಿ ಸುನೀತಾ, ಶ್ರೀಮತಿ ಕಲ್ಯಾಣಿ, ಶ್ರೀಮತಿ ನೀತಾ, ಶ್ರೀ ಗಿರೀಶ್ ಭಾಗವಹಿಸಿರುತ್ತಾರೆ.

**ವಿದ್ಯಾಭಾರತಿ ಜ್ಞಾನ ವಿಜ್ಞಾನ ಗಣಿತ ಮೇಳ ರಾಷ್ಟ್ರ ಮಟ್ಟಕ್ಕೆ ಆಯ್ಕೆ 19.10.2024**

ಶಾರದಾ ವಿದ್ಯಾನಿಕೇತನ ತಲಪಾಡಿಯಲ್ಲಿ ನಡೆದ ವಿದ್ಯಾಭಾರತಿ ಕ್ಷೇತ್ರ ಮಟ್ಟದ ಜ್ಞಾನ ವಿಜ್ಞಾನ ಗಣಿತ ಮೇಳದಲ್ಲಿ ಸಂಸ್ಕೃತಿ ಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಶ್ರೀನಿವಾಸ, ತುಷಾರ್, ಗಗನ್ – ಪ್ರಥಮ ಸ್ಥಾನ ಪಡೆದು, ವೇದ ಗಣಿತ ರಸಪ್ರಶ್ನೆಯಲ್ಲಿ ಚಿನ್ಮಯಿ, ಆಶಿಕಾ, ಚೈತ್ರ –ಪ್ರಥಮ ಸ್ಥಾನ ಪಡೆದು, ಪತ್ರ ಲೇಖನದಲ್ಲಿ ಅಂಕಿತ್ ಗುಪ್ತ – ಪ್ರಥಮ ಸ್ಥಾನ ಪಡೆದು, ಆಶು ಭಾಷಣದಲ್ಲಿ ಯಶಸ್ – ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದರೆ.

**ರಾಷ್ಟ್ರ ಮಟ್ಟದ ಅಥ್ಲೇಟಿಕ್ಸ್ ಕ್ರೀಡಾಕೂಟ**

24.10.2024 ರಿಂದ 27.10.2024ರವರೆಗೆ ಮಧ್ಯಪ್ರದೇಶದ ಸತ್ನದಲ್ಲಿ ನಡೆದ ವಿದ್ಯಾಭಾರತಿ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನ್ ಆಯೋಜಿಸಿದ ರಾಷ್ಟ್ರ ಮಟ್ಟದ ಅಥ್ಲೇಟಿ–ಕ್ಸ್ ಕ್ರೀಡಾಕೂಟದಲ್ಲಿ ಪ್ರಥಮ್ ದ್ವಿತೀಯ ವಿಜ್ಞಾನ ,ಪ್ರೇಕ್ಷಿತಾ ದ್ವಿತೀಯ ವಿಜ್ಞಾನ, ದೀಕ್ಷಿತಾ ದ್ವಿತೀಯ ವಾಣಿಜ್ಯ,ಅನ್ವಿ ಪ್ರಥಮ ವಾಣಿಜ್ಯ , ವ್ಯವಸ್ಥಾಪಕರಾಗಿ ಶ್ರೀ ಮಹೇಂದ್ರ ಮಂಜುನಾಥ್ ಭಟ್ ಇವರು ಭಾಗವಹಿಸಿರುತ್ತಾರೆ.

**ಪದವಿ**

Beach fest ಕಾರ್ಯಕ್ರಮ:

03.10.2024 ರಂದು ಶ್ರೀರಾಮ ಪದವಿ ವಿಭಾಗದಿಂದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಕ್ರೀಡಾಸಂಘ ಆಯೋಜಿತ Beach fest ಕಾರ್ಯಕ್ರಮವು ಮಂಗಳೂರಿನ ತಣ್ಣೀರು ಬಾವಿಯಲ್ಲಿ ನಡೆಯಿತು.ಶ್ರೀರಾಮ ವಿದ್ಯಾ–ಕೇಂದ್ರದ ಸಂಸ್ಥಾಪಕರಾದ ಡಾ॥ ಪ್ರಭಾಕರ್ ಭಟ್ ಕಲ್ಲಡ್ಕ ಇವರು ಕಾರ್ಯಕ್ರಮಕ್ಕೆ ಶುಭಹಾರೈಕೆ ಮಾಡುತ್ತ ಸಮುದ್ರಕ್ಕೆ ಕ್ಷೀರಾಭಿಷೇಕ ಮಾಡಿ ವಾಲಿಬಾಲ್ ಚೆಂಡನ್ನು ಹಾರಿಸಿ ಪ್ರತಾಪ ಕ್ರೀಡಾ ಸಂಘದ ಉದ್ಘಾಟನೆ ಮಾಡಿದರು, ಬಳಿಕ ಅರವಿಂದ್ ಬೆಂಗ್ರೇ ಸಾಮಾಜಿಕ ಕಾರ್ಯಕರ್ತರು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಇದೇ ವೇಳೆ ಹಲವು ಜನರನ್ನು ನೀರಿನಿಂದ ರಕ್ಷಿಸಿದ ಸಾಹಸಿಯಾದ ಅನೀಶ್ ರವರು ಸಮುದ್ರ ಸಾಹಸಿ ಪ್ರದರ್ಶನವನ್ನು ನೀಡಿದರು. ಬಿ.ಎ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಜಯಲಕ್ಷ್ಮಿ ಮಾತಾಜಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಬಳಿಕ 17–09–2024 ರಿಂದ 03–10–2024 ರವರೆಗೆ ಸ್ವಚ್ಛತಾ ಹೀ ಸೇವಾ 2024 ರ ವರೆಗಿನ ಕಾರ್ಯಕ್ರಮವು ಸಮುದ್ರ ತೀರವನ್ನು ಕಸ ಹೆಕ್ಕಿ ಶುಚಿಗೊಳಿಸುವ ಮೂಲಕ ತೆ–ರೆಕಂಡಿತು. ಬಳಿಕ ಮರಳು ಶಿಲ್ಪ, ವಾಲಿಬಾಲ್, ಥ್ರೋ ಬಾಲ್, ಓಟಗಳು ಮುಂತಾದ ಆಟಗಳನ್ನು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದು ವಿಜೇತರಿಗೆ ಬಹುಮಾನವನ್ನು ನೀಡಲಾಯಿತು. ಉಪನ್ಯಾಸಕ ಮತ್ತು ಉಪನ್ಯಾಸಕೇತರ ವೃಂದದವರ ಸಹಭಾಗಿತ್ವದ ಲ್ಲಿ ಕಾರ್ಯಕ್ರಮವು ಮುಕ್ತಾಯಗೊಂಡಿತು.

**2023–2024 ನೇ ಸಾಲಿನ ಬಿಎ, ಬಿ ಕಾಂ ಮತ್ತು ಬಿಸಿಎ ಫಲಿತಾಂಶ :**

ಬಿ. ಎ ವಿಭಾಗ : ದ್ವಿತೀಯ ಸೆಮಿಸ್ಟರ್ ನಲ್ಲಿ (83%) ಒಟ್ಟು 6 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ಮತ್ತು ಚತುರ್ಥ ಸೆಮಿಸ್ಟರ್ ನಲ್ಲಿ (94%) ಒಟು 11 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ (ಪದ್ಮಶ್ರೀ 95% ) ಮತ್ತು (ಧನ್ಯ ಶ್ರೀ 90%) ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಬಿ ಕಾಂ ವಿಭಾಗ : ದ್ವಿತೀಯ ಸೆಮಿಸ್ಟರ್ ನಲ್ಲಿ (100%) ಒಟ್ಟು 29 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ (ಹರ್ಷಿತಾ 91%) ಮತ್ತು ಚತುರ್ಥ ಸೆಮಿಸ್ಟರ್ ನಲ್ಲಿ (90%) ಒಟ್ಟು 24 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ( ಮನ್ವಿತ ಎ 94.2% ,ಮಾಧವ 92.8%, ನಾಮ್ ದೇವ್ ಕೆ 92%, ಮನೀಶ್ 91% ) ಮತ್ತು ಆರನೇ 89% ಸೆಮಿಸ್ಟರ್ ನಲ್ಲಿ ಒಟ್ಟು 35 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ (ನಿಶ್ಮಿತಾ ಆಳ್ವ 98%, ಪ್ರತೀಕ್ಷಾ ಕೆ ಪೂಜಾರಿ 92.46%, ಶ್ರುತಿನ್ 92.46%, ಪ್ರತೀಕ್ಷಾ 92.30%, ದೀಪ 92%, ಚೈತ್ರ ಪಿ 90.30%, ನಾಗವೇಣಿ 90.15%, ಶಾರಧ 90% ) ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

**ಬಿ.ಸಿ.ಎ ವಿಭಾಗ**

ದ್ವಿತೀಯ ಸೆಮಿಸ್ಟರ್ ನಲ್ಲಿ (89.28% )ಒಟ್ಟು 24 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ದಿವ್ಯಲಕ್ಷ್ಮಿ 95.75%, ಅಶ್ವಿನಿ 95.75%, ಪಲ್ಲವಿ 93.25%, ಗಣ್ಯಶ್ರೀ 92.75%, ಪಿ ಪ್ರೀತಿ ಶ್ರೀ 92.12% , ಹರ್ಷಿತ್ ಗಟ್ಟಿ 91.13% , ಪ್ರಥಮ್ ನೋಂಡ 90% 66%, ಸಂತೋಷ್ 90.63% ) ಮತ್ತು ಚತುರ್ಥ ಸೆಮಿಸ್ಟರ್ ನಲ್ಲಿ (81.66%) ಒಟ್ಟು 49 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ (ಪ್ರತೀಕ್ಷಾ 90% )ಮತ್ತು ಆರನೇ ಸೆಮಿಸ್ಟರ್ ನಲಿ ್ಲ(100%)ಒಟ್ಟು 21ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ( ವಾಣಿ ಶ್ರೀ 92.79%, ಯಶಸ್ವಿ ಕೆ 92.48%, ಮೋಕ್ಷಾ 90.70%, ರಮ್ಯ ಪಿ 90.50%, ದೀಪ ಶ್ರೀ 90% ) ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

**ಪದ ಸಂಪತ್ತು ವಿಶೇಷ ಉಪನ್ಯಾಸ** 5.10.24

ಕನ್ನಡ ಪದ ಸಂಪತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಬೆಂಗಳೂರಿನ ಸಂಶೋಧನಾ ಸಾಹಿತಿಗಳಾದ ಶ್ರೀ ಆಗುಂಬೆ ಎಸ್ ನಟರಾಜ್ ಇವರು ಶ್ರೀ ಮದ್ಭಗವದ್ಗೀತಾ ಹೊತ್ತಗೆಗೆ ಪುಷ್ಪಾರ್ಚನೆ ಗೈಯುವ ಮೂಲಕ ಉದ್ಘಾಟನೆ ಮಾಡಿ ಶುಭಹಾರೈಸಿದರು. ಇದೇ ವೇಳೆ ಅಕ್ಷರ ಗಣಪ ಚಿತ್ತಾರ ವನ್ನು ಪ್ರಾಂಶುಪಾಲರಾದ ಶ್ರೀ ಕೃಷ್ಣ ಪ್ರಸಾದ್ ಶ್ರೀಮಾನ್ ಇವರು ಅನಾವರಣಗೊಳಿಸಿ ಅಧ್ಯಕ್ಷೀಯ ಮಾತುಗಳನ್ನಾಡಿದರು. ಬಳಿಕ ಕನ್ನಡ ಸಂಸ್ಕೃತಿ ಸೇವಾ ಭಾರತೀಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಓಂಕಾರ ಪ್ರಿಯ ಬಾಗೇಪಲ್ಲಿ ಇವರು ಕನ್ನಡ ಪದ ಸಂಪತ್ತು ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ಶ್ರೀ ಯತಿರಾಜ್ ಮತ್ತು ಸಾಹಿತ್ಯ ಸಂಘದ ನಿರ್ದೇಶಕಿ ರಶ್ಮಿತಾ ಮಾತಾಜಿ ಉಪಸ್ಥಿತರಿದ್ದರು.

**ಮೋಂತಿಮಾರ್ ದೇವಸ್ಥಾನದಲ್ಲಿ ಭಜನಾ ಕಾರ್ಯಕ್ರಮ 05.10.2024**

ಪದವಿ ಮಹಾವಿದ್ಯಾಲಯದ ಭಜನಾ ತಂಡ ನವರಾತ್ರಿ ಉತ್ಸವದ ಸಂದರ್ಭದಲ್ಲಿ ಮೋಂತಿಮಾರ್ ದೇವಸ್ಥಾನದಲ್ಲಿ ನಡೆದ ಭಜನಾ ಕಾರ್ಯಕ್ರಮವು ಅತ್ಯುತ್ತಮ ಯಶಸ್ಸನ್ನು ಕಂಡಿರುತ್ತದೆ.

**ಭವಿಷ್ ಘಟಕದ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ 05.10.2024**

ಭವಿಷ್ ಘಟಕದ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ತರಗತಿಯನ್ನು ತೆಗೆದುಕೊಳ್ಳಲಾಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಕನ್ನಡ ಸಂಸ್ಕೃತಿ ಸೇವಾ ಭಾರತೀಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಓಂಕಾರ ಪ್ರಿಯ ಬಾಗೇಪಲ್ಲಿ ಇವರು ಭಾಷಾ ಸ್ಪಷ್ಟತೆ ವಿಷಯದ ಕುರಿತು ಉಪನ್ಯಾಸ ನೀಡಿದರು. ಭವಿಷ್ ಘಟಕದ ನಿರ್ದೇಶಕಿ ಸಹನಾ ಮಾತಾಜಿ ಮತ್ತು ಸಹನಿರ್ದೇಶಕರಾದ ಜಯಲಕ್ಷ್ಮಿ ಮಾತಾಜಿ, ಸಂಧ್ಯಾ ಮಾತಾಜಿ ಮತ್ತು ರಶ್ಮಿತಾ ಮಾತಾಜಿ ಉಪಸ್ಥಿತರಿದ್ದರು.

**ಇಂಟರ್ ಕಾಲೇಜು ಪಿಯು ಫೆಸ್ಟ್ ಉತ್ಕರ್ಷ 2024 ಲೋಗೋ ಬಿಡುಗಡೆ 22.10.2024**

8–11–2024ರಂದು ಶ್ರೀರಾಮ

ಮಹಾವಿದ್ಯಾಲಯ ಕಲ್ಲಡ್ಕ ಇಲ್ಲಿ ಇಂಟರ್ ಕಾಲೇಜು ಪಿಯು ಫೆಸ್ಟ್ ಉತ್ಕರ್ಷ 2024 ನಡೆಯಲಿದ್ದು ಇದರ ಲೋಗೋವನ್ನು ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್ ಶ್ರೀಮಾನ್ ಮತ್ತು ಶ್ರೀರಾಮ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಶ್ರೀಮಾನ್ ಇವರು ಬಿಡುಗಡೆ ಮಾಡಿದರು.ಚೆಂಡೆವಾದನ ಮತ್ತು ಸಿಡಿಮದ್ದು ಕಾರ್ಯಕ್ರಮಕ್ಕೆ ಮೆರುಗು ನೀಡಿದ್ದು, ಈ ಕಾರ್ಯಕ್ರಮದಲ್ಲಿ ಪ್ರದೀಪ್ತ ಸಾಂಸ್ಕೃತಿಕ ಸಂಘದ ನಿರ್ದೇಶಕರು, ಸಹನಿರ್ದೇಶಕರು ಮತ್ತು ಕಾಲೇಜಿನ ಉಪನ್ಯಾಸಕ ಮತ್ತು ಉಪನ್ಯಾಸಕೇತರ ವೃಂದ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ಶುಲ್ಬಸೂತ್ರದ ಕೊಡುಗೆ ಗೂಗಲ್ ಮೀಟ್ ಉಪನ್ಯಾಸ: 22.10.2024**

ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು ಅದಮಾರು ಉಡುಪಿಯ ಉಪನ್ಯಾಸಕರು, ಸಂಪನ್ಮೂಲ ವ್ಯಕ್ತಿಯಾದ ಡಾ. ಜಯಶಂಕರ ಕಂಗಣ್ಣಾರ್ ಇವರು ಗೂಗಲ್ ಮೀಟ್ ನಲ್ಲಿ ಭಾರತೀಯ ಗಣಿತ ಶಾಸ್ತ್ರಕ್ಕೆ ಶುಲ್ಬಸೂತ್ರದ ಕೊಡುಗೆ ಎಂಬ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು. ಕಾಲೇಜಿನ ಉಪನ್ಯಾಸಕ ವೃಂದ ಮತ್ತು ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು.

**ಪೋಷಕರ ಸಮಾವೇಶ: 23.10.2024**

ಮಹಾವಿದ್ಯಾಲಯದ ಪ್ರೇರಣಾ ಸಭಾಂಗಣದಲ್ಲಿ ಪದವಿ ವಿಭಾಗದ ಪೋಷಕರ ಸಮಾವೇಶವು ನಡೆಯಿತು. ಹಿರಿಯರು ಭಾರತಮಾತೆಯ ಬಾವಚಿತ್ರಕ್ಕೆ ಪುಷ್ಪಾರ್ಚನೆ ಗೈದು ಆರಂಭಗೊಂಡ ಕಾರ್ಯಕ್ರಮವು ಬಳಿಕ ಎಲ್ಲಾ ಉಪನ್ಯಾಸಕರು ತಮ್ಮ ಕಿರು ಪರಿಚಯವನ್ನು ಮಾಡಿದ ಬಳಿಕ ಪೋಷಕರು ತಮ್ಮ ಮಕ್ಕಳು ಮತ್ತು ಸಂಸ್ಥೆಯ ಕುರಿತಾಗಿ ಧನಾತ್ಮಕವಾಗಿ ಮಾತನಾಡಿದರು . ಬಳಿಕ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿರುವ, ಶ್ರೀರಾಮ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಶ್ರೀ ಪ್ರಭಾಕರ್ ಭಟ್ ಕಲ್ಲಡ್ಕ ಇವರುವಿದ್ಯಾಸಂಸ್ಥೆ ಬೆಳೆದು ಬಂದ ಹಾದಿ, ವಿದ್ಯಾರ್ಥಿಗಳ ಉತ್ತಮ ಫಲಿತಾಂಶ ಮತ್ತು ವಿದ್ಯಾಸಂಸ್ಥೆಗೆ ಪೋಷಕರ ಸಹಕಾರ ಕುರಿತಾಗಿ ಶುಭಾಂಸ ನುಡಿಗಳನ್ನಾಡಿದರು. ಇದೇ ವೇಳೆ 2024–25 ನೆ ಸಾಲಿನ ಪೋಷಕರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ವೇದಿಕೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಮತ್ತು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್ ಶ್ರೀಮಾನ್ ಇವರು ಉಪಸ್ಥಿತರಿದ್ದರು. ವಿದ್ಯಾರ್ಥಿನಿಯಾದ ಮನ್ವಿತ ( ತೃತೀಯ ಬಿ. ಕಾಂ ) ಪ್ರಾರ್ಥನೆ ಮಾಡಿ ಕಾಲೇಜಿನ ಉಪಪ್ರಾಂಶುಪಾಲರಾದ ಶ್ರೀ ಯತಿರಾಜ್ ಶ್ರೀಮಾನ್ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ವಾಣಿಜ್ಯ ವಿಭಾಗದ ಉಪನ್ಯಾಸಕಿ ಶ್ರೀಮತಿ ಅಶ್ವಿತ ವಂದಿಸಿ, ರಾಜ್ಯಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮಿ ನಿರೂಪಿಸಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

**ಪ್ರಜ್ಞಾನ ಸಾಹಿತ್ಯ ಸಂಘದ ವತಿಯಿಂದ ಕವನ ವಾಚನ ಸ್ಪರ್ಧೆ 25.10.2024**

ಶ್ರೀರಾಮ ಪ್ರಥಮದರ್ಜೆ ಕಾಲೇಜಿನಲ್ಲಿ ಪ್ರಜ್ಞಾನ ಸಾಹಿತ್ಯ ಸಂಘದ ವತಿಯಿಂದ ಪಠ್ಯ ಪುಸ್ತಕದಿಂದ ಆಯ್ದ ಕವನಗಳ ವಾಚನ ಸ್ಪರ್ಧೆ ನಡೆಯಿತು. ಭಾರತಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಗೈದು ಆರಂಭಗೊಂಡ ಕಾರ್ಯಕ್ರಮದಲ್ಲಿ ಪಠ್ಯಪುಸ್ತಕದಿಂದ ಆಯ್ದ ಕವನಗಳನ್ನು ಮುಕ್ತವಾಗಿ 50 ವಿದ್ಯಾರ್ಥಿಗಳು ವಾಚಿಸಿದರು.

ಬಿ. ಎ ವಿಭಾಗದಲ್ಲಿ : ಪದ್ಮಶ್ರೀ ತೃತೀಯ ಬಿ. ಎ ಪ್ರಥಮ , ಕವಿತಾ ದ್ವಿತೀಯ ಬಿ. ಎ ದ್ವಿತೀಯ , ಶುಭಲಕ್ಷ್ಮಿ ದ್ವಿತೀಯ ಬಿ. ಎ ಮತ್ತು ಕವನ ಪ್ರಥಮ ಬಿ. ಎ ತೃತೀಯ . ಬಿ.ಕಾಂ ವಿಭಾಗದಲ್ಲಿ : ಪಲ್ಲವಿ ತೃತೀಯ ಬಿ.ಕಾಂ ಪ್ರಥಮ , ಮನ್ವಿತ ತೃತೀಯ ಬಿ.ಕಾಂ ದ್ವಿತೀಯ , ವಿಜೇತ ತೃತೀಯ ಬಿ.ಕಾಂ ತೃತೀಯ. ಬಿ. ಸಿ.ಎ ವಿಭಾಗದಲ್ಲಿ : ಯಜ್ಞಶ್ರೀ ದ್ವಿತೀಯ ಬಿ.ಸಿ.ಎ ಪ್ರಥಮ ,ಅಶ್ವಿನಿ ದ್ವಿತೀಯ ಬಿ.ಸಿ.ಎ ದ್ವಿತೀಯ , ಗೌತಮಿ ತೃತೀಯ ಬಿ.ಸಿ.ಎ ತೃತೀಯ ಬಹುಮಾನವನ್ನು ಪಡೆಕೊಂಡರು. ಕಾರ್ಯಕ್ರಮದ ಅತಿಥಿ ಮತ್ತು ಅಧ್ಯಕ್ಷತೆಯನ್ನು ವಹಿಸಿದ್ದ ಆಮಂತ್ರಣ ಸಾಂಸ್ಕೃತಿಕ ಮತ್ತು ಸಾಹಿತಿಕ ಸಂಸ್ಥೆ ಕರ್ನಾಟಕದ ಅಧ್ಯಕ್ಷರಾಗಿದ್ದ ಶ್ರೀ ವಿಜಯ್ ಕುಮಾರ್ ಜೈನ್ ಇವರು ಕವಿಗೋಷ್ಠಿಯ ಅಧ್ಯಕ್ಷಿಯ ನೆಲೆಯಲ್ಲಿ ಸಾಹಿತ್ಯದ ಪ್ರಕಾರಗಳು ಮತ್ತು ಸ್ಪರ್ಧಾತ್ಮಕ ಜಗತ್ತಿನಲ್ಲಿ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ಕುರಿತು ಶುಭಾಂಸ ನುಡಿಗಳನ್ನಾಡುತ್ತಾ ವಿಜೇತರಿಗೆ ಅಭಿನಂದನಾ ಪತ್ರ, ಲೇಖನಿ ಮತ್ತು ಹೊತ್ತಗೆಯನ್ನು ಬಹುಮಾನವಾಗಿ ವಿತರಿಸಿದರು. ಮತ್ತು ಕವನ ವಾಚಿಸಿದ ಎಲ್ಲರಿಗೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಉಪನ್ಯಾಸಕರುಗಳು ಅಭಿನಂದನಾ ಪತ್ರ ನೀಡಿ ಗೌರವಿಸಿದರು. ತೀರ್ಪುಗಾರರಾಗಿ ರಾಜ್ಯಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮಿ ಮಾತಾಜಿ ಮತ್ತು ಹಿಂದಿಭಾಷಾ ಉಪನ್ಯಾಸಕಿ ಶ್ರೀಮತಿ ವಿಭಾನಿ ಮಾತಾಜಿ ಸಹಕರಿಸಿದರು.

ವೇದಿಕೆಯಲ್ಲಿ ಶ್ರೀರಾಮ ಪದವಿ ಕಾಲೇಜಿನ ಉಪ ಪ್ರಾಂಶುಪಾಲರಾದ ಶ್ರೀಮತಿ ಸುಕನ್ಯ ಮಾತಾಜಿ ಮತ್ತು ಶ್ರೀ ಯತಿ–ರಾಜ್ ಶ್ರೀಮಾನ್ ಮತ್ತು ಪ್ರಜ್ಞಾನ ಸಾಹಿತ್ಯ ಸಂಘದ ನಿರ್ದೇಶಕಿಯಾದ ಶ್ರೀಮತಿ ರಶ್ಮಿತಾ ಮಾತಾಜಿ ಕವಿಗೋಷ್ಠಿಗೆ ಚಾಲನೆಯಿತ್ತು, ಸಹ ನಿರ್ದೇಶಕಿಯಾದ ಶ್ರೀಮತಿ ಸಂಧ್ಯಾ ಮಾತಾಜಿ ಸ್ವಾಗತಿಸಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯಾದ ಮನ್ವಿತಾ (ತೃತೀಯ ಬಿ.ಕಾಂ) ಪ್ರಾರ್ಥಿಸಿ, ಪದ್ಮಶ್ರೀ (ತೃತೀಯ ಬಿ. ಎ) ವಂದಿಸಿ, ಅಶ್ವಿನಿ ದ್ವಿತೀಯ (ಬಿ.ಸಿ.ಎ) ನಿರೂಪಿಸಿದರು. ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

**ವಾರ್ಷಿಕ ಕ್ರೀಡಾಕೂಟದ ಉದ್ಘಾಟನೆ:**

**ಮಹಾವಿದ್ಯಾಲಯದ ಪ್ರತಾಪ್ ಕ್ರೀಡಾಸಂಘದ ವತಿಯಿಂದ ವಾರ್ಷಿಕ ಕ್ರೀಡಾಕೂಟವು 26.10.2024**

ವಿವಿಧ ಕ್ರೀಡೆಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿದ ವಿದ್ಯಾರ್ಥಿಗಳು ಕ್ರೀಡಾಜ್ಯೋತಿಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರೂ ಆದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕ್ರೀಡೆಯು ಮನಸ್ಸು ಮತ್ತು ಆರೋಗ್ಯಕ್ಕೆ ಉತ್ತಮ ಪರಿಣಾಮ ಬೀರುತ್ತದೆ. ಸತತ ಪ್ರಯತ್ನದಿಂದ ಕ್ರೀಡಾಕ್ಷೇತ್ರದ ಅವಕಾಶಗಳನ್ನು ಬಳಸಿಕೊಂಡು ಮುನ್ನುಗ್ಗಿ ಸಾಧನೆ ಮಾಡಬೇಕು ಎಂಬುದಾಗಿ ಶುಭಹಾರೈಸಿದರು. ರಾಷ್ಟ್ರೀಯ ಕಬಡ್ಡಿ ಆಟಗಾರರಾದ ಭರತ್ ಡಿ ಶೆಟ್ಟಿ ಇವರು, ನಮ್ಮ ಭಾರತದೇಶವು ಕ್ರೀಡಾಕ್ಷೇತ್ರದಲ್ಲಿ ಇನ್ನಷ್ಟು ಸಾಧನೆ ಮಾಡಬೇಕಾದರೆ ಪ್ರತಿಯೊಬ್ಬರೂ ದಿನನಿತ್ಯ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿ ಶುಭಹಾರೈಸಿದರು. ಕ್ರೀಡಾಸಂಘದ ನಿರ್ದೇಶಕ ಪ್ರಶಾಂತ್ ಸೋಮಯಾಜಿ ಕ್ರೀಡಾ ಪ್ರತಿಜ್ಞೆ ಬೋಧಿಸಿದರು. ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಶಿಕ್ಷಕ ರಕ್ಷಕ ಸಂಘದ ಪದಾಧಿಕಾರಿ ಶ್ರೀ ಪ್ರಭಾಕರ ಶೆಟ್ಟಿ, ಆಳ್ವಾಸ್ ಕಾಲೇಜಿನ ಕಬಡ್ಡಿ ತರಬೇತುದಾರ ವರುಣ್ ಕೊಟ್ಟಾರಿ, ಕಾಲೇಜು ಪ್ರಾಂಶುಪಾಲರಾದ ಕೃಷ್ಣ ಪ್ರಸಾದ್ ಕಾಯರ್ ಕಟ್ಟೆ, ಉಪ ಪ್ರಾಂಶುಪಾಲರಾದ ಶ್ರೀಮತಿ ಸುಕನ್ಯಾ, ಪ್ರತಾಪ್ ಕ್ರೀಡಾಸಂಘದ ನಿರ್ದೇಶಕ ಪ್ರಶಾಂತ್ ಸೋಮಯಾಜಿ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅರ್ಥಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಸಂಧ್ಯಾ ಕುಮಾರಿ ಸ್ವಾಗತಿಸಿ, ಬಿಸಿಎ ವಿದ್ಯಾರ್ಥಿ ಜಯಸೂರ್ಯ ವಂದಿಸಿ ಅಂತಿಮ ಬಿಕಾಂ ವಿದ್ಯಾರ್ಥಿನಿ ವಿಸ್ಮಿತಾ ಕಾರ್ಯಕ್ರಮ ನಿರೂಪಿಸಿದರು.

**ಸಾಹಿತಿಗಳ ಸಂದರ್ಶನ 27.10.2024**

ಶ್ರೀರಾಮ ಪ್ರಥಮದರ್ಜೆ ಕಾಲೇಜಿನ ದ್ವಿತೀಯ ಬಿ.ಎ ವಿಭಾಗದ ಆಸಕ್ತ ವಿದ್ಯಾರ್ಥಿಗಳಿಗೆ ಬಂ. ತಾಲೂಕಿನ ಗ್ರಾಮೀಣ ಭಾಗದ ಸಾಹಿತಿಗಳ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ರಾಷ್ಟ್ರಮಟ್ಟದ ಸಾಹಿತಿಯಾದ ಕಾವ್ಯ ಚೇತನ ಪ್ರಶಸ್ತಿ ಪುರಸ್ಕೃತೆ ಶ್ರೀಮತಿ ವಿಂಧ್ಯಾ ಎಸ್ ರೈ ಇವರನ್ನು ಸಂದರ್ಶಿಸಲಾಗಿ ಸಾಹಿತ್ಯಕ್ಕೆ

ಬದುಕು ಇಂದು ಮುಂದು ಎಂದು ಎಂಬ ಶೀರ್ಷಿಕೆಯಡಿಯಲ್ಲಿ ಹಲವಾರು ಮಾಹಿತಿಗಳನ್ನು ಪಡೆಕೊಳ್ಳಲಾಯಿತು.

ಈ ಸಂದರ್ಶನದಲ್ಲಿ ಕನ್ನಡ ಉಪನ್ಯಾಸಕಿಯಾದ ರಶ್ಮಿತಾ ಮಾತಾಜಿ ಜೊತೆ ದ್ವಿತೀಯ ಬಿ. ಎ ವಿಭಾಗದ ವಿದ್ಯಾರ್ಥಿನಿಯರಾದ ಶುಭಲಕ್ಷ್ಮಿ, ಕವಿತಾ, ರಕ್ಷಾ, ತುಷಿತ ಮತ್ತು ಚೈತನ್ಯ ಇವರು ಸಂದರ್ಶನವನ್ನು ಮಾಡಿರುತ್ತಾರೆ .

**ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಹೂದೋಟ 28.10.2024**

ರಂದು ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ವಸುಧಾರ ಗೋಶಾಲೆಯ ಎದುರು ಗುಲಾಬಿ ಹೂದೋಟ ಮಾಡುವರೇ ಗುಲಾಬಿ ಗಿಡಗಳನ್ನು ನೆಡಲಾಯಿತು. ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಲಕ್ಷ್ಮೀ ರಘುರಾಜ್, ವಿದ್ಯಾ-ಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಪದವಿ ವಿಭಾಗದ ಪ್ರಾಂಶುಪಾಲರಾದ ಕೃಷ್ಣಪ್ರಸಾದ್ ಕಾಯರ್ ಕಟ್ಟೆ, ಉಪ ಪ್ರಾಂಶುಪಾಲೆ ಸುಕನ್ಯಾ, ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿ ಯತಿ-ರಾಜ್ ಪಿ. ಸಹ ಯೋಜನಾಧಿಕಾರಿ ವರ್ಷಾ ಉಪಸ್ಥಿತರಿದ್ದು, ಉಪನ್ಯಾಸಕರಾದ ಜಯಲಕ್ಷ್ಮಿ, ದೀಕ್ಷಿತ, ಧನಂಜಯ್, ರಶ್ಮಿತ, ಕಛೇರಿ ಸಿಬ್ಬಂದಿಗಳಾದ ಶಿಲ್ಪಾ, ವಿಶಾಲಾಕ್ಷಿ, ಶಿಲ್ಪಶ್ರೀ, ಭಾಗ್ಯರಥಿ ಗಿಡ ನೆಡುವ ಮೂಲಕ ಸಹಕರಿಸಿದರು.

**ರಾಷ್ಟ್ರೀಯ ಏಕತಾ ದಿವಸ್ :**

ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯ ಕಲ್ಲಡ್ಕ ಇದರ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳಿಂದ ದಿನಾಂಕ


ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

ಚಿನ್ನಾಭರಣ ಸಾಲ – 11%
ಜಾಮೀನು ಸಾಲ – 16.5%
ಅಡವು ಸಾಲ – 13.5%
ವಾಹನ ಸಾಲ – 12%
ಗೃಹ ನಿರ್ಮಾಣ ಸಾಲ – 11.5%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

91ದಿನಗಳವರೆಗೆ – 7.5%
92ರಿಂದ 181 ದಿನಗಳು – 8%
182 ರಿಂದ 364 ದಿನಗಳು – 9%
1 ವರ್ಷ ಮತ್ತು ಮೇಲ್ಪಟ್ಟು – 10%

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

सरयू ಸರಯೂ

Vol. : 11 Issue : 4 Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in, www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363